Joint Farming Co-operative Societies in the State.

47 SRI G. MADE GOWDA (Kirugaval)–Will the Minister for Finance and Co-operation be pleased t state.—

(a) the No. of Joint Farming Co-operative Societies in the State ;

(b) the No. of Families brought under each Co-operative Societies ;

(c) the amount of loan or subsidies given to each society ;

(d) what is the profit earned by these societies ?

SRI M. VEERAPPA MOILY.—Minitser for Finance and Co-operation

(a) 522.

(b) Statement laid on the table*

(c) Statement laid on the table*

(d) Rs. 3,56,716,00.

ಶ್ರೀ ಜಿ. ಮಾದೇಗೌಡ.—ಸಂಯುಕ್ತ ಬೇಸಾಯ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದಂಥ ಉದ್ದೇಶವೇನು ಮತ್ತು ಈ ಉದ್ದೇಶ ಎಷ್ಟರಮಟ್ಟಿಗೆ ಫಲಕಾರಿಯಾಗಿವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ವೀರಪ್ಪಮೊಯ್ಲಿ - ಸಂಯುಕ್ತ ಬೇಸಾಯ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿದ ಉದ್ದೇಶ ಬಹಳ ಚೆನ್ನಾಗಿದೆ. ಇದರ ಉದ್ದೇಶ ಏನೆಂದರೆ ಯಾರು ಯಾರು ದುರ್ಬಲರಾಗಿರತಕ್ಕಂಥ ರೈತರಿದ್ದಾರೆ ಅವರು ಬೇರೆ ಬೇರೆ ಕಾರಣಗಳಿಂದ ತಮ್ಮ ಆರ್ಥಿಕ ತೊಂದರೆಯಿಂದ ಅಥವಾ ತಾಂತ್ರಿಕ ವಾದಂಥ ಅವಶ್ಯಕತೆಗಳಿಗಾಗಿ ಸಾಮುದಾಯಕ ಅಂದರೆ ಜಾಯಿಂಟ್ ಫಾರ್ಮಿಂಗ್ ಮಾಡಬೇಕು ಎನ್ನುವ ಉದ್ದೇಶದಿಂದ ಅನೇಕ ಸೊಸೈಟಿಗಳನ್ನು ಪ್ರಾರಂಭ ಮಾಡಿದ್ದು. ಆದರೆ ಈ ಪ್ರಯೋಗ ಅಷ್ಟು ಯಶಸ್ವಿಯಾಗಲಿಲ್ಲ. ಅದಕ್ಕೆ ನಾವು ಅಲಾಖೆಯವರು ಇದರ ಉದ್ದೇಶ ಘನತರವಾದುದು, ಏಕೆ ಸಾಧನೆ ಯಾಗಲಿಲ್ಲ ಎಂದು ಇಷ್ಟರವರೆಗೆ ಯಾವುದೇ ರೀತಿಯಾದಂಥ ಮಾಹಿತಿಯನ್ನು ಪಡೆದುಕೊಳ್ಳುವುದಕ್ಕೆ ಆಗಲಿಲ್ಲ, ಪಡೆದುಕೊಳ್ಳತಕ್ಕಂಥ ಪ್ರಯತ್ನ ಕೂಡ ಈ ದಿಶೆಯಲ್ಲಿ ಆಗಿಲ್ಲ. ಆದುದರಿಂದ ಈ ಬಗ್ಗೆ ಇರತಕ್ಕ ತೊಂದರೆ ಏನು, ತಾಂತ್ರಿಕದೋಷ ಇದ್ದರೆ ಇದನ್ನೆಲ್ಲಾ ಪರಿಹಾರ ಮಾಡುವಂಥ ಒಂದು ಸಾಧನೆಯನ್ನು ಸರ್ಕಾರ ಮಾಡಬೇಕು ಎಂದು ಒಂದು ಅಂದಾಜು ಮಾಡಿದ್ದೇವೆ. ಇದರ ಉದ್ದೇಶ ಘನವಾಗಿದೆ. ದುರ್ಬಲವರ್ಗಕ್ಕೆ ಸೇರಿದಂಥ ರೈತರನ್ನು ಆರ್ಥಿಕವಾಗಿ ಸಂಘಟಿಸಿ ಈ ಕಾರ್ಯಕ್ರಮ ವನ್ನು ಮುಂದುವರಿಸಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ ಈ ಉದ್ದೇಶ ಸಫಲವಾಗದೇ ಇರಲಿಕ್ಕೆ ಏನು ಕಾರಣ, ಈ ಕಾರಣವನ್ನು ಕಂಡುಹಿಡಿದು ಇನ್ನು ಮುಂದೆ ಈ ಪ್ರಯೋಗ ಯಶಸ್ವಿ ಯಾಗುವ ರೀತಿಯಲ್ಲಿ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಜಿ. ಮಾದೇಗೌಡ.— ಸ್ವಾಮಿ, ಇದುವರೆಗೂ ಇಡೀ ರಾಜ್ಯದಲ್ಲಿ ೫೨೨ ಸಂಘಗಳು ಇದೆಎಂದು ಹೇಳಿದ್ದೀರಿ. ಇವುಗಳಿಗೆ ತಾವು ಕೊಟ್ಟಿರತಕ್ಕ ಸಾಲ ೫೨, ೭೨, ೨೮೦ ರೂ.ಗಳು ಸಬ್ಸಿಡಿ ೯,೦೯,೪೧೬ ರೂ. ಗಳು, ಇದರಿಂದ ಬಂದಿರತಕ್ಕ ಲಾಭ ೩,೫೬,೭೧೬.೦೦ ರೂ. ಗಳು. ಇದರಲ್ಲಿ ತಾವು ಏನು ೫೨,೭೨,೨೮೦ ರೂ. ಗಳನ್ನು ಸಾಲವನ್ನು ಈ ಸಂಘಗಳಿಗೆ ಕೊಟ್ಟಿದ್ದೀರಿ ಅದರಿಂದ ಎಷ್ಟು ಮರು ಪಾವತಿಯಾಗಿದೆ ? ಇದರಿಂದ ಸರ್ಕಾರಕ್ಕೆ ಎಷ್ಟು ಲಾಭ ಬಂದಿದೆಯೆಂಬುದನ್ನು ತಿಳಿಸುತ್ತೀರಾ ?

---

*Copy placed in the Karnataka Legislature Library vide No. 1 dated 25-2-1980.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದರಲ್ಲಿ ೫೨೨ ಸಹಕಾರ ಸಂಘಗಳಲ್ಲಿ ೧೨೩ ಸಹಕಾರ ಸಂಘಗಳು ಮಾತ್ರ ಲಾಭದಾಯಕವಾಗಿ ಕೆಲಸ ಮಾಡಿವೆ. ಅಂದರೆ ಉಳಿದಿದ್ದೆಲ್ಲಾ ಮಾಡಿಲ್ಲ, ಮತ್ತು ಪಾವತಿಯನ್ನು ಮಾಡಿರುವ ಬಗ್ಗೆ ನನ್ನಲ್ಲಿ ಮಾಹಿತಿ ಈಗಿಲ್ಲ. ಅದಕ್ಕೆ ಮತ್ತೊಮ್ಮೆ ಯಾವಾಗಲಾದರೂ ಪ್ರಶ್ನೆ ಹಾಕಿದರೆ ಮಾಹಿತಿ ತರಿಸಿ ಕೊಡುತ್ತೇನೆ.

ಶ್ರೀ ಜಿ. ಮಾದೇಗೌಡ.—ನಾನು ಕೆಲವು ಸಹಕಾರ ಸಂಘಗಳನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ ಅಲ್ಲಿ ಕೆಲವು ಜನ ಸೇರಿಕೊಂಡು ನೀವು ಏನು ಸಬ್ಸಿಡಿ ಮತ್ತು ಸಾಲವನ್ನು ಕೊಡುತ್ತೀರಿ, ಅದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಅದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪಮೊಯ್ಲಿ.—ಯಾವಾಗಲೂ ಸಬ್ಸಿಡಿಯನ್ನು ಮತ್ತು ಸಾಲವನ್ನು ಕೊಡುವ ಉದ್ದೇಶವೇನೆಂದರೆ, ಇದನ್ನು ಸದುಪಯೋಗ ಮಾಡಿಕೊಂಡು ನಮ್ಮ ಸರ್ಕಾರದ ಕಾರ್ಯಕ್ರಮವೇನಿದೆ ಅದನ್ನು ಯಶಸ್ವಿ ಮಾಡಬೇಕು ಎಂಬುದೇ ಆಗಿದೆ. ಆದರೆ ತಾವು ಹೇಳಿದ ಹಾಗೆ ೧೨೩ ಸೊಸೈಟಿಗಳು ಮಾತ್ರ ಲಾಭದಾಯಕವಾಗಿ ಕೆಲಸ ಮಾಡಿವೆ, ಬಾಕಿ ಸೊಸೈಟಿಗಳು ಲಾಭ ದಾಯಕವಾಗಿ ಮಾಡಿಲ್ಲ. ತಾವು ಹೇಳದಂಥ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ಆದುದರಿಂದ ಇದರ ಬಗ್ಗೆ ಒಂದು ವಿಚಾರಣೆ ನಡೆಸಿ ಎಲ್ಲೆಲ್ಲಿ ದುರುಪಯೋಗವಾಗಿದೆ, ಆ ರೀತಿ ದುರುಪಯೋಗ ವಾಗಿರುವುದಕ್ಕೆ ಕಾರಣವೇನೆಂಬುದನ್ನು ಪತ್ತೆಹಚ್ಚಿ ಮಾಹಿತಿಯನ್ನು ಪಡೆಯಬೇಕಾದ್ದು ಅವಶ್ಯಕವಿದೆ, ಅದನ್ನು ಖಂಡಿತವಾಗಿಯೂ ಮಾಡುತ್ತೇನೆ.

ಶ್ರೀ ಜಿ ಮಾದೇಗೌಡ.—ಇಂಥಾ ಸಹಕಾರ ಸಂಘಗಳ ಉದ್ದೇಶವೇನೆಂದರೆ ದುರ್ಬಲ ವರ್ಗದವರನ್ನೆಲ್ಲಾ ಒಟ್ಟಿಗೆ ಸೇರಿಸಿ, ಅವರಿಗೆ ವ್ಯವಸಾಯಕ್ಕೆ ಅನುಕೂಲವಾಗುವಂತೆ ಮಾಡಿ, ಅವರ ಆರ್ಥಿಕ ಸುಧಾರಣೆಯನ್ನು ಉತ್ತಮ ಪಡಿಸಬೇಕೆಂಬುದೇ ಸರ್ಕಾರದವರ ಉದ್ದೇಶವಾಗಿದೆ, ಆದರೆ ಆ ಉದ್ದೇಶವೇ ಸಫಲವಾಗುತ್ತಿಲ್ಲ, ಇದಕ್ಕೆ ಕಾರಣ ಅಲ್ಲಿ ಕೆಲವರೇ ಸೇರಿಕೊಂಡು ಸಂಘಗಳನ್ನು ಮಾಡಿಕೊಂಡು ಸರ್ಕಾರದಿಂದ ಹಣ ಪಡೆದು ಕೊಂಡು ಅದನ್ನು ದುರುಪಯೋಗ ಪಡಿಸಿ ಕೊಳ್ಳುತ್ತಿದ್ದಾರೆ, ಸರ್ಕಾರದ ಹಣವನ್ನು ಲೂಟಿ ಮಾಡುತ್ತಿದ್ದಾರೆ, ಇಂಥವರ ಮೇಲೆ ಸರ್ಕಾರ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ ?

ಶ್ರೀ ಎಂ. ವೀರಪ್ಪಮೊಯ್ಲಿ.—ನಮ್ಮ ಸರ್ಕಾರದ ಕಾರ್ಯಕ್ರಮಗಳಿಂದ ನಿಜವಾಗಿಯೂ ಸಾಮಾಜಿಕ ಬದಲಾವಣೆ ಆಗುವ ಸಾಧ್ಯತೆ ಇದೆ, ಆ ರೀತಿ ಮಾಡುವಲ್ಲಿಯೂ ಸಹ ನಮ್ಮ ಸರ್ಕಾರಕ್ಕೆ ಸ್ಫೂರ್ತಿ ಇದೆ. ಬಡ ಜನರನ್ನು ಮೇಲೆತ್ತುವ ಸಂದರ್ಭದಲ್ಲಿ ಅಂಥಾ ಸಂಘಗಳಲ್ಲಿ ಅನೇಕ ಹೆಗ್ಗಣಗಳು ಬರುತ್ತವೆ. ಆ ರೀತಿ ಬರುವ ಹೆಗ್ಗಣಗಳನ್ನು ತಪ್ಪಿಸಿ, ಶೋಷಣೆ ರಹಿತ ಸಹಕಾರಿ ಕ್ಷೇತ್ರವನ್ನಾಗಿ ಮಾಡಬೇಕೆಂಬುದೇ ನಮ್ಮ ಸಂಕಲ್ಪ. ಈ ದಿಸೆಯಲ್ಲಿ ಜಾಯಿಂಟ್ ಫಾರ್ಮಿಂಗ್ ಕೊ ಆಪರೇಟಿವ್ ಸೊಸೈಟಿ ಕೂಡ ಒಂದು ಪ್ರಾಮುಖ್ಯವಾದ ಸಂಸ್ಥೆಯಾಗಿ ಕೆಲಸ ಮಾಡುತ್ತಿದೆ. ಆದರೆ ಇದು ಸಹ ಸರಿಯಾಗಿ ಕೆಲಸ ಮಾಡಲಿಲ್ಲ ಇದರಲ್ಲಿ ಸಹ ಹೆಚ್ಚು ಹೆಗ್ಗಣಗಳು ಸೇರಿರಬಹುದು ಆದರೆ ಇವುಗಳನ್ನೆಲ್ಲಾ ನಿಗ್ರಹ ಮಾಡಿಕೊಂಡು, ಈ ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳನ್ನು ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡಿಕೊಂಡು ಹೋಗುವ ಹಾಗೆ ಮಾಡಬೇಕೆಂಬುದೇ ಸರ್ಕಾರದ ನೀತಿಯಾಗಿದೆ, ಆದರೆ ಅಲ್ಲಿ ಹೆಗ್ಗಣಗಳು ಬಂದು ಸೇರಿ ಬಿಟ್ಟವೆ ಎನ್ನುವ ಕಾರಣ ಮಾತ್ರಕ್ಕೇ ಇದನ್ನು ಕೈ ಬಿಡಬೇಕು ಎನ್ನುವುದನ್ನು ಒಪ್ಪುವುದಿಲ್ಲ.

ಶ್ರೀ ಜಿ. ಮಾದೇಗೌಡ.—ಇದರಲ್ಲಿ ಲಕ್ಷಾಂತರ ರೂಪಾಯಿಗಳು ಲೂಟಿಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ? ಆ ರೀತಿ ತನಿಖೆ ಮಾಡಿಸಲು ಸರ್ಕಾರದವರಲ್ಲಿ ಸಿಬ್ಬಂದಿ ಇಲ್ಲವೇ, ಅಧಿಕಾರಿಗಳು ಇಲ್ಲವೇ, ಇದರ ಬಗ್ಗೆ ಸರ್ಕಾರದವರು ಪಕ್ಕಕ್ಕೆ ಕಣ್ಮುಚ್ಚಿಕೊಂಡು ಕುಳಿತಿದ್ದಾರೆ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ,—ಇದರ ವಿಚಾರವನ್ನು ನಾವು ಪರಿಶೀಲನೆ ಮಾಡಿದಾಗ ಯಾವುದೇ ರೀತಿಯಾದಂಥ ಎನ್‌ಕ್ವೈರಿ ಆಗಲೀ, ರಿಪೋರ್ಟ್ ಆಗಲೀ, ಮಾಡಿಲ್ಲ ಅದನ್ನು ನಾನು ಒಪ್ಪುತ್ತೇನೆ. ಆದರೆ ಇನ್ನು ಮುಂದೆ ಇದನ್ನು ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡಿ ಎಲ್ಲೆಲ್ಲಿ ತಪ್ಪುಗಳಾಗಿವೆಯೋ ಅದನ್ನು ಪತ್ತೆ ಹಚ್ಚಿ ತನ್ಮೂಲಕ ಈ ಕಾರ್ಯ ಕ್ರಮವನ್ನು ಯಶಸ್ವಿಗೊಳಿಸುವುದಕ್ಕೆ ಯಾವ ಆತಂಕವಿದ್ದರೂ ಕೂಡ ಅದನ್ನು ತೆಗೆದು ಹಾಕಿ ನಮ್ಮ ಕಾರ್ಯಕ್ರಮವನ್ನು ಯಶಸ್ವಿ ಮಾಡುತ್ತೇವೆ, ಎಂದು ಈ ಸದನಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ.